ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಬಿಡಿಓ ರವರು ಎಲ್ಲೂ ಹೋಗಿಲ್ಲ ಅವರು ಅಲ್ಲಿಯೇ ಇದ್ದಾರೆ. ಅವರಿಗೆ ವಹಿಸಿರುವ ಕೆಲಸಗಳನ್ನು ಅವರು ಮಾಡಿಕೊಂಡು ಹೋಗುತ್ತಿದ್ದಾರೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಎಲ್ಲಾ ತಾಲ್ಲೂಕುಗಳಲ್ಲಿ ಈಗ ಬಿ.ಡಿ.ಓ.ಗಳು ಇಲ್ಲ. ಬಿ.ಡಿ.ಓ. ಹುದ್ದೆಗಳನ್ನು ರದ್ದುಪಡಿಸಿದ್ದಾರೆ. ಮಾನ್ಯ ಸಚಿವರು ಅದನ್ನು ಸರಿಯಾಗಿ ಅರ್ಥೈಸಬೇಕು.

ಶ್ರೀ ಎಂ.ವೈ. ಘೋರ್ಪಡೆ : ಅದರ ಬಗ್ಗೆ ಒಂದು ಹೈಪವರ್ ಕಮಿಟಿ ಮಾಡಿ ಎಕಾನಮಿ ಮೆಸರ್ ಅಂತ ಬಿ.ಡಿ.ಓ.ಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದು ಮಾಡಿದ್ದಾರೆ. ಅವರ ಜಾಗದಲ್ಲಿ ಎಕ್ಸಿಕ್ಯುಟಿವ್ ಆಫೀಸರ್ಸ್ ಕೆಲಸ ಮಾಡಬೇಕೆಂದು ಮಾಡಿದ್ದಾರೆ. ಎಕ್ಸಿಕ್ಯುಟಿವ್ ಆಫೀಸರ್ ಹೈಯರ್ ರ್ಯಾಂಕ್ ಆಫೀಸರ್. ಏಕೆಂದರೆ ಎಕ್ಸ್‌ಟೆನ್ಷನ್ ಆಫೀಸರ್ಸ್ ಇದ್ದಾಗ ಕಡಿಮೆ ರ್ಯಾಂಕ್‌ನ ಜನ ಇದ್ದರು ತಾಲ್ಲೂಕು ಮಟ್ಟಕ್ಕೆ. ಈಗ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಿಂದ ಹೈಯರ್ ರ್ಯಾಂಕ್ ಆಫೀಸರ್ಸ್ ಬಂದಿರುವುದರಿಂದ ಬಿ.ಡಿ.ಓ. ಗಿಂತ ಹೈಯರ್ ಆಫೀಸರ್ ಇಡುವುದು ಉತ್ತಮವೆಂದು ಮಾಡಿದ್ದಾರೆ. ಇದರಲ್ಲಿ ತಪ್ಪೇನು ಇದೆ?

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಇಲ್ಲಿ ಬಿ.ಡಿ.ಓ. ಹುದ್ದೆ ಏತಕ್ಕೋಸ್ಕರ ಬೇಕೆಂದರೆ, ಎಕ್ಸಿಕ್ಯುಟಿವ್ ಆಫೀಸರ್ ಹುದ್ದಗಳನ್ನು ಮಾಡಿದ ಮೇಲೆ ಬಿ.ಡಿ.ಓ. ಹುದ್ದೆಗಳನ್ನು ರದ್ದುಮಾಡಲಾಗಿದೆ. ಆದರೆ ಎಕ್ಸಿಕ್ಯುಟಿವ್ ಆಫೀಸರ್‌ಗೆ ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು ಸಮಗ್ರವಾಗಿರುವುದರಿಂದ, ಸಮಗ್ರವಾದ ಕಾರ್ಯಕ್ರಮಗಳನ್ನು ಮಾಡಬೇಕಾಗಿರುವುದರಿಂದ ಎಕ್ಸಿಕ್ಯುಟಿವ್ ಆಫೀಸರ್ ಅದನ್ನು ಪರಿಶೀಲನೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವರ ಕೈ ಕೆಳಗಡೆ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಆಫೀಸರ್‌ಗಳನ್ನಾದರೂ ಕೂಡ ನೇಮಕ ಮಾಡಿ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯಲಿಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎಂ.ವೈ. ಘೋರ್ಪಡೆ : ಎಲ್ಲೆಲ್ಲಿ ಬಿ.ಡಿ.ಓ.ಗಳು ಇದ್ದಾರೆ ಅವರು ಎಕ್ಸಿಕ್ಯುಟಿವ್ ಆಫೀಸರ್ಸ್‌ಗೆ ಅಸಿಸ್ಟ್ ಮಾಡುತ್ತಿದ್ದಾರೆ, ಇದು ತಮಗೆ ಗೊತ್ತಿದೆ.

ಬಿಜಾಪುರ ಜಿಲ್ಲೆಯಲ್ಲಿ ಖಾಸಗಿ ಅನುದಾನಿತ ಸಂಸ್ಥೆಗಳಿಗೆ ವೇತನ ಬಿಡುಗಡೆ

248 (2212) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ವೇತನವನ್ನು ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ..... ವೇತನವನ್ನು ಎಂದಿನಿಂದ ತಡೆಹಿಡಿಯಲಾಗಿದೆ;

ಇ) ಸದರಿ ಶಿಕ್ಷಕರ ತಡೆಹಿಡಿದ ವೇತನವನ್ನು ತಕ್ಷಣ ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಅನುದಾನಿತ ಶಾಲೆಗಳಲ್ಲಿ ಅನುದಾನ ಸಂಹಿತೆಯ ಪ್ರಕಾರ ನಿಗದಿತ ವಿದ್ಯಾರ್ಥಿ ಸಿಬ್ಬಂದಿ ಹೊಂದಿದ್ದಲ್ಲಿ ಹಾಗೂ ಇತರ ಷರತ್ತುಗಳು ಪೂರೈಸಲ್ಪಟ್ಟಿದ್ದರೆ ಅಂಥಹ ಶಿಕ್ಷಕರು ವೇತನಾನುಧಾನವನ್ನು ಪಡೆಯುತ್ತಿರುತ್ತಾರೆ. ಆದರೆ, ನಿಗದಿತ ವಿದ್ಯಾರ್ಥಿ ಸಂಖ್ಯೆಯನ್ನು ಹೊಂದಿರುವಂಥಹ ಹಾಗೂ ಸರ್ಕಾರ ಅನುದಾನಕ್ಕೆ ಸಂಬಂಧಪಟ್ಟ ನೀತಿಗೆ ವಿರುದ್ಧವಾಗಿ ಅನುದಾನಕ್ಕೆ ಒಳಪಡಿಸಿರುವ ಪ್ರಕರಣಗಳ ವೇತನವನ್ನು ತಡೆಹಿಡಿಯಲಾಗಿದೆ.

ಆ) ಖಾಸಗಿ ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಅನುಪಾತಕ್ಕಿಂತ ಹೆಚ್ಚಿರುವ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಅಗತ್ಯವಾಗಿರುವ ಶಾಲೆಗಳಿಗೆ ಅವರನ್ನು ವರ್ಗಾಯಿಸಲು ಅವಶ್ಯ ನಿಯಮಗಳನ್ನು ಹಾಗೂ ಸೂಚನೆಗಳನ್ನು ಅಧಿಸೂಚನೆ ಸಂಖ್ಯೆ: ಇಡಿ 52 ವಿವಿಧ 99, ದಿನಾಂಕ: 2-2-2000 ದಲ್ಲಿ ಹಾಗೂ ಸುತ್ತೋಲೆ ಸಂಖ್ಯೆ: ಇಡಿ 200 ಪಿಎಂಸಿ 99, ದಿನಾಂಕ:3-2-2000 ದಲ್ಲಿ ಹೊರಡಿಸಿದ್ದು, ಅವುಗಳನ್ವಯ ಸೂಕ್ತಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿರತಕ್ಕ ಖಾಸಗಿ ಅನುದಾನಿತ ಪ್ರೌಢಶಾಲಾ ಶಿಕ್ಷಕರ ವೇತನವನ್ನು ಸುಮಾರು ಒಂದೂವರೆ ವರ್ಷದಿಂದ ತಡೆಹಿಡಿಯಲಾಗಿದೆ. ಆ ಶಿಕ್ಷಣ ಸಂಸ್ಥೆಗಳಲ್ಲಿ ಕೆಲವು ನ್ಯೂನ್ಯತೆಗಳು ಇದ್ದಾವೆ ಎನ್ನುವ ಮಾತನ್ನು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಆದರೆ ಸುಮಾರು ವರ್ಷಗಳಿಂದ ಅಲ್ಲಿ ಕೆಲಸ ಮಾಡಿ ವೇತನವನ್ನು ತೆಗೆದುಕೊಳ್ಳತಕ್ಕ ಶಿಕ್ಷಕರು ಸುಮಾರು ಒಂದೂವರೆ ವರ್ಷದಿಂದ ವೇತನವಿಲ್ಲದೆ ಬಹಳ ತೊಂದರೆಗೆ ಒಳಪಟ್ಟಿದ್ದಾರೆ. ಈಗ ಅವರನ್ನು ಬೇರೆ ಶಾಲೆಗಳಿಗೆ ವರ್ಗ ಮಾಡಿದರೂ ಕೂಡ ಅವರಿಗೆ ಆ ವೇತನವನ್ನು ಬಿಡುಗಡೆ ಮಾಡಬೇಕು. ಏಕೆಂದರೆ ಅವರಿಗೆ ನೌಕರಿ ಸಿಕ್ಕಿದೆ ಅಂದಮೇಲೆ ಸಾಕಷ್ಟು ಜನ ಹೆಣ್ಣುಮಕ್ಕಳ ತಂದೆತಾಯಿಗಳು ಅವರಿಗೆ ವರದಕ್ಷಿಣೆ ಕೊಟ್ಟು ಮಗಳು ಕೊಟ್ಟು ಮದುವೆ ಮಾಡಿದ್ದಾರೆ. ತಾವು ದಯಮಾಡಿ ಮಾನವೀಯ ದೃಷ್ಟಿಯಿಂದ ಎಲ್ಲರಿಗೂ ತಡೆಹಿಡಿದಿರುವಂತಹ ವೇತನವನ್ನು ಬಿಡುಗಡೆ ಮಾಡಿ ಬೇರೆ ಶಾಲೆಗಳಿಗೆ ವರ್ಗಾವಣೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಹೆಚ್.ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯಲ್ಲಿ ಕೆಲವು ಶಿಕ್ಷಕರಿಗೆ ಸಂಬಳವನ್ನು ನಿಲ್ಲಿಸಲಾಗಿದೆ. ಆದರಲ್ಲಿ 1987ನೇ ಇಸವಿಯೊಳಗೆ ಅನುದಾನ ಸಂಹಿತೆಗೆ ಸೇರಿಕೊಂಡ ಹಾಗೆ ಅವರಿಗೆ ಅನುಮೋದನೆ ಕೊಟ್ಟಿರತಕ್ಕ ಶಾಲೆಗಳಲ್ಲಿ ಸುಮಾರು 451 ಜನ ಶಿಕ್ಷಕರು ಶಿಕ್ಷಕ-ವಿದ್ಯಾರ್ಥಿ ಅನುಪಾತದ ಉಲ್ಲಂಘನೆಯ ಮೇರೆಗೆ ಅವರಿಗೆ ಸಂಬಳವನ್ನು ನಿಲ್ಲಿಸಲಾಗಿದೆ. ಅದನ್ನು ಕೊಡಲಾಗುತ್ತಿದೆ. ಏಕೆಂದರೆ ಹೆಚ್ಚುವರಿ ಶಿಕ್ಷಕರನ್ನೆ ಎಲ್ಲಿ ಬೇಡಿಕೆಯಿದೆ ಅಲ್ಲಿಗೆ ಡಿಪ್ಲಾಯ್‌ಮೆಂಟ್ ಆರ್ಡರ್ ಕೊಡುತ್ತಿದ್ದ ಹಾಗೆಯೇ ನಾವು ಅವರಿಗೆ ಸಂಬಳವನ್ನು ಕೊಡುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಅದರ ಜೊತೆಗೆ 1987ನೇ ಇಸವಿಯ ಮೇಲೆ ಜಿಲ್ಲಾಪಂಚಾಯಿತಿಯವರೆ, ಸರ್ಕಾರದ ಅಧಿಕಾರವನ್ನು ತಾವೇ ಅವರು ಪ್ರಯೋಗ ಮಾಡಿ ಸುಮಾರು 17 ಶಾಲೆಗಳ 115 ಶಿಕ್ಷಕರಿಗೆ ಅವರು ಸಂಬಳವನ್ನು ಮಂಜೂರು

ಮಾಡಿಕೊಂಡಿದ್ದಾರೆ. ಈಗ ಅದನ್ನು ನಿಲ್ಲಿಸಲಾಗಿದೆ. ಏಕೆಂದರೆ ಆ ಅಧಿಕಾರ ಅವರಿಗಿಲ್ಲ. ಕೆಲವು ಪಂಚಾಯಿತಿಗಳು ಅವರಿಗಿಲ್ಲದಂತಹ ಅಧಿಕಾರವನ್ನು ಅವರು ಕೊಟ್ಟು ಅನುಮೋದನೆಯನ್ನು ಕೊಟ್ಟಿದ್ದಾರೆ. ಅಂತಹ 115 ಶಿಕ್ಷಕರಿಗೆ ನಾವು ಸಂಬಳವನ್ನು ನಿಲ್ಲಿಸಿದ್ದೇವೆ. ಮತ್ತು ಆ ಶಾಲೆಗಳು ಕೂಡ ಅಕ್ರಮವೆಂದು ಘೋಷಣೆ ಮಾಡಿದ್ದೇವೆ. ಅವರಿಗೆ ಮಾತ್ರ ಸಂಬಳವನ್ನು ನಾವು ಯಾವುದೇ ಕಾರಣದಿಂದ ಕೊಡುವುದಕ್ಕಾಗುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಬೆಳ್ಳುಬ್ಬಿಯವರು ಎತ್ತಿದ ಪ್ರಶ್ನೆಯಲ್ಲಿ ಬಳ್ಳಾರಿ ಮತ್ತು ಬೀದರ್ ಜಿಲ್ಲೆಯಲ್ಲಿ ಈ ಸಮಸ್ಯೆಯಿದೆ. ಬಹುಶಃ ರಾಜ್ಯದ ಬೇರೆ ಭಾಗದಲ್ಲಿಯೂ ಈ ಸಮಸ್ಯೆ ಇದೆ ಯಾವಾಗ ಅಕ್ರಮವಾಗಿ ನೇಮಕ ಮಾಡಿದ್ದು, ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಅನುಪಾತ ಏನಿದೆ ಆ ಗೈಡ್‌ಲೈನ್ಸನ್ನು ಉಲ್ಲಂಘನೆ ಮಾಡಿರತಕ್ಕದ್ದು ಇದು ಇರಬಹುದು. ಇವತ್ತು ಏನಾಗಿದೆ ಅಂದರೆ ಕೆಲವೊಂದು ಮ್ಯಾನೇಜ್‌ಮೆಂಟ್‌ನವರು ಉಲ್ಲಂಘನೆಯನ್ನು ಮಾಡಿ ಆ ಶಿಕ್ಷಕರನ್ನು ಗೋಳಾಡಿಸುತ್ತಿದ್ದಾರೆ. ಮಾನ್ಯ ಮಂತ್ರಿಗಳು 1987ರ ಒಳಗಿನ ವಿಷಯದ ಬಗ್ಗೆ ಹೇಳಿದರು. 1987 ರೊಳಗೆ ನೇಮಕವಾದಂತಹ ಶಿಕ್ಷಕರಿಗೆ 10 ತಿಂಗಳಿನಿಂದ ವೇತನವನ್ನು ಕೊಟ್ಟಿಲ್ಲ. ಅವರನ್ನು ಬೇರೆ ಕಡೆ ವರ್ಗಮಾಡಿ ಸಂಬಳ ಕೊಡುವಂತಹದ್ದು ಒಂದು ವಿಷಯ. ಈಗಾಗಲೇ ಇವರು ನೇಮಕವಾಗಿದ್ದು, ಸರ್ವೀಸ್‌ನಲ್ಲಿ ಇದ್ದಂತಹ ಸಂದರ್ಭದಲ್ಲಿ ಈಗೊಂದು ಅನುಪಾತ ಉಲ್ಲಂಘನೆಯಾಗಿದೆ ಎನ್ನುವಂತಹ ದೃಷ್ಟಿಕೋನದಿಂದ ಇವರಿಗೆ ವೇತನ ನಿಲ್ಲಿಸುವಂತಹದ್ದು ಸರಿಯಲ್ಲ. ಅದಕ್ಕಾಗಿ ಇವತ್ತು ಬಳ್ಳಾರಿ, ಬಿಜಾಪುರ ಬೀದರ್ ಇರಬಹುದು ಮತ್ತು ಇನ್ನಿತರ ಜಿಲ್ಲೆಗಳಲ್ಲಿರಬಹುದು. ಇಂತಹ ಶಿಕ್ಷಕರಿಗೆ ತಕ್ಷಣ ವೇತನ ಕೊಡುವಂತಹ ವ್ಯವಸ್ಥೆಯಾಗಬೇಕು. ಕಳೆದ 8-10 ತಿಂಗಳಿನಿಂದ ಅವರಿಗೆ ವೇತನ ಸಿಕ್ಕಿಲ್ಲ. ಅವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದರೆ ಹೋಗಲಿಕ್ಕೂ ಅವರು ತಯಾರಿದ್ದಾರೆ. ಏಕೆಂದರೆ ಮ್ಯಾನೇಜ್‌ಮೆಂಟ್‌ನವರು ಮತ್ತು ಕೆಲವೊಂದು ಅಧಿಕಾರಿಗಳು ಮಾಡಿದ ತಪ್ಪಿನಿಂದ ಇವರು ಬಲಿಪಶು ಆಗಬಾರದು. ಅದಕ್ಕಾಗಿ ಇವರಿಗೆ ತಕ್ಷಣ ವೇತನ ಬಿಡುಗಡೆಯಾಗಬೇಕು. ಮತ್ತು ಅವರುಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವುದಕ್ಕೆ ತಕ್ಷಣ ಕ್ರಮವನ್ನು ಕೈಗೊಳ್ಳಬೇಕೆಂದು ಶಿಕ್ಷಣ ಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ಹೆಚ್ಚುವರಿ ಶಿಕ್ಷಕರಿಗೆ ಕೋರ್ಟಿನ ಆದೇಶದ ಮೇರೆಗೆ ಸಂಬಳ ನಿಲ್ಲಿಸಿರತಕ್ಕದ್ದು, ಸಂಬಳವನ್ನು ನಿಲ್ಲಿಸುವುದರ ಜೊತೆಗೆ ಅವರು ಹೇಗೆ ಹೆಚ್ಚುವರಿ ಶಿಕ್ಷಕರನ್ನು ಮಾಡಿದ್ದಾರೆ ಅವರಿಗೆ ರೀ-ಎಂಪ್ಲಾಯಿಮೆಂಟ್ ಮಾಡಬೇಕೆಂದು ಕೂಡ ಕೋರ್ಟ್ ಆದೇಶ ಕೊಟ್ಟಮೇಲೆ ಅದನ್ನು ನಾವು ಸೇವಾ ನಿಯಮಕ್ಕೆ ತಿದ್ದುಪಡಿಯನ್ನು ತೆಗೆದುಕೊಂಡು ಬಂದು ಅವರಿಗೆ ರೀಎಂಪ್ಲಾಯಿಮೆಂಟ್ ಆರ್ಡರ್ಸ್ ಕೊಡುತ್ತಿದ್ದೇವೆ. ಹೆಚ್ಚುವರಿ ಶಿಕ್ಷಕರು ಎಲ್ಲಿದ್ದಾರೆಂದು ನಿಖರವಾಗಿ ಗುರುತುಪಡಿಸಲಾಗಿದೆ. ಅವರಿಗೆ ಬೇರೆ ಕಡೆಗೆ ವರ್ಗಾವಣೆ ಮಾಡುವುದು ರೀಎಂಪ್ಲಾಯಿಮೆಂಟ್ ವ್ಯವಸ್ಥೆಯನ್ನು ಕೂಡ ಮಾಡುತ್ತಿದ್ದೇವೆ. ಯಾರು ಈ ರೀತಿ ಅನುಪಾತದ ಉಲ್ಲಂಘನೆಯಲ್ಲಿ ಅವರ ಸಂಬಳ ನಿಂತಿದೆ ಅವರಿಗೆ ಖಂಡಿತವಾಗಿಯೂ ಸಂಬಳವನ್ನು ಬಿಡುಗಡೆ ಮಾಡುತ್ತೇವೆ. ಆದರೆ 1987ರ ನಂತರ ಜಿಲ್ಲಾ ಪಂಚಾಯಿತಿಯವರು ಅನುಮೋದನೆ

ಕೊಟ್ಟಂತಹದ್ದು ಅದು ಸರ್ಕಾರದ ನಿಯಮ ಉಲ್ಲಂಘನೆಯಾಗಿರುವುದರಿಂದ ಅದರ ಬಗ್ಗೆ ನಾವು ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ನಾನು 252 (2595) ಪ್ರಶ್ನೆಯನ್ನು ಕೇಳಬಯಸುತ್ತೇನೆ.

ಡಾ: ಜಿ.ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಡಲು ಸಮಯ ಕೇಳಿದ್ದೇನೆ.

ಅಧ್ಯಕ್ಷರು : 15 ದಿವಸ ಸಮಯ ಕೊಡುವುದಕ್ಕಾಗುವುದಿಲ್ಲ. ಒಂದು ವಾರದಲ್ಲಿ ಉತ್ತರ ಒದಗಿಸಿ.

ಶ್ರೀ ಡೊಂಗರಗಾಂವ್ ಶಹಜಹಾನ್ ಇಸ್ಮಾಯಿಲ್ : ಮಾನ್ಯ ಅಧ್ಯಕ್ಷರೆ, 247 (2258) ಪ್ರಶ್ನೆಯನ್ನು ಕೇಳಬೇಕಾಗಿದೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆಗೆ ಮುಂದಿನ ವಾರ ಉತ್ತರ ಕೊಡಿಸೋಣ. ಮುಂದಿನ ವಾರ ಉತ್ತರ ಬರುವ ಹಾಗೆ ಮಾಡುತ್ತೇನೆ. ಏಳು ಹೆಲ್ಡ್‌ಓವರ್ ಪ್ರಶ್ನೆಗಳಿಗೆ ಉತ್ತರ ನಮ್ಮಲ್ಲಿ ರೆಡಿಯಾಗಿದೆ. ಇವತ್ತು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವವರು ಮಾತನಾಡಿ ಮುಗಿಸಿ ನಾಳೆ ಮುಖ್ಯಮಂತ್ರಿಗಳು ಉತ್ತರ ಹೇಳಬೇಕಾಗಿದೆ. ಅದಕ್ಕೆ ಅವುಗಳನ್ನು ಅಜೆಂಡಾದಲ್ಲಿ ಹಾಕಿ ಕೊಂಡಿಲ್ಲ. 12 ಪ್ರಶ್ನೆಗಳು, ಹೆಲ್ಡ್‌ಓವರ್ ಪ್ರಶ್ನೆ 7 ಒಟ್ಟು 19 ಪ್ರಶ್ನೆಗಳಾಗುತ್ತವೆ. ಅದನ್ನು ಮುಗಿಸಬೇಕಾದರೆ ಎರಡು ಗಂಟೆ ಸಮಯ ಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಕರಡಿ ಸಂಗಣ್ಣನವರ ಪ್ರಶ್ನೆಯಲ್ಲಿ ಏನೂ ಇಲ್ಲ, ಅದಕ್ಕೆ ಉತ್ತರ ಕೊಡಬಹುದಾಗಿತ್ತು. ಏನು ಕಾರಣವೋ ಗೊತ್ತಿಲ್ಲ ಸಂಬಂಧಪಟ್ಟ ಮಂತ್ರಿಗಳು ಇಲ್ಲಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ನಾನು ಹೋದ ತಿಂಗಳ ಪ್ರಶ್ನೆ ನಂ.1047ನ್ನು ಕೇಳಿದ್ದೆ. ನನಗೆ ಇನ್ನೂ ಕೂಡ ಉತ್ತರ ಬಂದಿಲ್ಲ.

ಅಧ್ಯಕ್ಷರು : ಉತ್ತರಗಳು ಬಂದಹಾಗೆ ನಾವು ಹಾಕುತ್ತಿದ್ದೇವೆ. ತಮ್ಮದು ಹೆಲ್ಡ್‌ಓವರ್ ಪ್ರಶ್ನೆಯಲ್ಲಿರಬಹುದು. ಈ ತಿಂಗಳ 30ನೇ ತಾರೀಖಿನೊಳಗೆ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಸರ್ಕಾರದಿಂದ ತರಿಸಿಕೊಳ್ಳುವುದಕ್ಕೆ ನಾನು ಏರ್ಪಾಟು ಮಾಡುತ್ತೇನೆ.

ಶ್ರೀ ಹೆಚ್.ಗೋಪಾಲ ಭಂಡಾರಿ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಸಂಖ್ಯೆ:247(2346) ಅದರ ಬಗ್ಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು : ಅದಕ್ಕೂ 15 ದಿವಸ ಸಮಯ ಕೇಳಿದ್ದಾರೆ. ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.